


ನಕ್ಕು ಬಿಡಿ

ಬ್ಯೂಟಿ ಪಾರ್ಲರ್ ಎದುರಿಗೆ ಹಾಕಿದ್ದ ಫಲಕದಲ್ಲಿನ ಒಕ್ಕಣೆ;
ಗಂಡಸರೇ ಎಚ್ಚರ! ಈ ಬ್ಯೂಟಿ ಪಾರ್ಲರ್ ನಿಂದ ಹೊರಬರುವ
Gorgeous Gireಗೆ ವಿಷಲ್ ಹೊಡೆಯ ಬೇಡಿ;
ಏಕೆಂದರೆ ಅದು ನಿಮ್ಮ Grand ma ಆಗಿರಬಹುದು!

★★★

ಮದುವೆಗೆ ಮೊದಲು ಹೆಣ್ಣು ಗಂಡನ್ನು Expect ಮಾಡುತ್ತಾಳೆ.
ಮದುವೆಯ ನಂತರ ಆಕೆ ಆತನನ್ನು Suspect ಮಾಡುತ್ತಾಳೆ.
ಸತ್ತ ನಂತರ ಆಕೆ ಆತನನ್ನು Respect ಮಾಡುತ್ತಾಳೆ– ಆತ ಸಾಕಷ್ಟು ಸ್ಥಿರಚರಾಸ್ತಿ ಬಿಟ್ಟು ಹೋಗಿದ್ದರೆ!

★★★



ವೈದ್ಯರೊಬ್ಬರ ಮಗ ಗುಂಡ ತನ್ನ ಫ್ರೆಂಡ್ ಸತೀಶ್ ನನ್ನು ತನ್ನ ತಂದೆಯ ಕ್ಲಿನಿಕ್ ತೋರಿಸಲು ಕರೆದುಕೊಂಡು ಬಂದಿದ್ದ. ಕನ್‌ಸಲ್ಟೇಷನ್ ರೂಮಿನಲ್ಲಿನ ಷೋಕೇಸ್ ಒಂದರಲ್ಲಿ ಮನುಷ್ಯನ ಅಸ್ಥಿ ಪಂಜರವನ್ನು ನೇತು ಹಾಕಲಾಗಿತ್ತು. ಅದನ್ನು ನೋಡಿದ ಸತೀಶ್ ಅಚ್ಚರಿಗೊಂಡು 'ಇದೇನು' ಎಂದು ಕೇಳಿದ.

ಇದು ನಮ್ಮ ಡ್ಯಾಡಿಯ ಮೊದಲ ಪೇಶಂಟ್ ಎಂದು ಉತ್ತರಿಸಿದ ಗುಂಡ!

★★★

ಆತ: 'ನೀನೊಬ್ಬ ನಿಷ್ಪ್ರಯೋಜಕ; ಹೆಣ್ಣಿಗ, ಅಮ್ಮಾವ್ರ ಗಂಡ'
ಈತ: ನಿನಗೆ ಧೈರ್ಯ ಇದ್ರೆ ನನ್ನ ಹೆಂಡತಿ ಎದುರಿಗೆ ಈ ಶಬ್ದಗಳನ್ನು ಆಡಿ ಬಚಾವ್ ಆಗು ನೋಡೋಣ!

ಸಂಗ್ರಹ: ಎಸ್ ವಿಶ್ವನಾಥ ಮಂಡ್ಯ



# ಸಿತಾರ್ ಪ್ರತಿಭೆ ಅಂಕುಶ್

ಇದು ಒಂದು ವಿಶಿಷ್ಟ ತಂತಿವಾದ್ಯ. ಕೇಳುಗರಲ್ಲಿ ಒಂದು ರೀತಿಯ ಸಂಚಲನ ಉಂಟುಮಾಡುವ ಈ ಸುಮಧುರ ನಾದದ ತಂತಿವಾದ್ಯ ಸಿತಾರ್. ಹಾಂ..! ಸಿತಾರ್ ಎಂದ ತಕ್ಷಣ ಥಟ್ಟನೆ ಹಿಂದೂಸ್ತಾನಿ ಸಂಗೀತ ಪ್ರಿಯರ ನೆನಪಿಗೆ ಬರುವುದು ವಿಶ್ವವಿಖ್ಯಾತ ಸಿತಾರ್ ಕಲಾವಿದರಾದ ಪಂ.ರವಿಶಂಕರ್, ಉಸ್ತಾದ್ ವಿಲಾಯತ್ ಖಾನ್, ಉಸ್ತಾದ್ ಸಜ್ಜಾದ್ ಹುಸೇನ್ ಖಾನ್ ಮತ್ತು ನಮ್ಮ ಹತ್ತಿರದವರೇ ಆದ ಖಾನ್ ಸಹೋದರರಾದ ಉಸ್ತಾದ್ ಶಫೀಕ್ ಖಾನ್, ರಫೀಕ್ ಖಾನ್...




ಇವೆಲ್ಲ ಸಂಗೀತ ದಿಗ್ಗಜರ ಮಾತಾಯಿತು. ಸಿತಾರ್‌ನಲ್ಲಿ ಭರವಸೆ ಮೂಡಿಸುವ ಉದಯೋನ್ಮುಖ ನಮ್ಮ ನಡುವೆ ಇದ್ದು, ಮೆಲ್ಲ ಮೆಲ್ಲನೆ ಈ ನಾದಲೋಕದಲ್ಲಿ ಹೆಸರು ಮಾಡಲು ಹೊರಟಿದ್ದಾರೆ. ಅವರೇ ಅಂಕುಶ್ ಪಿ. ನಾಯಕ್.

ಸಂಗೀತ ಮನೆತನದಲ್ಲೇ ಹುಟ್ಟಿದ ಅಂಕುಶ್, ಮಂಗಳೂರಿನ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯೊಂದರ ಅಧ್ಯಕ್ಷರಾಗಿರುವ ಎಲ್. ನರೇಂದ್ರ ನಾಯಕ್ ಅವರ ಪುತ್ರ. ಹಲವು ಕಛೇರಿಗಳಿಗೆ ಸಾಥಿ ನೀಡಿದ ಅನುಭವ ನರೇಂದ್ರ ನಾಯಕ್ ಅವರಿಗಿದೆ. ತಾಯಿ ಉಷಾಪ್ರಭಾ ಕೂಡ ಸಂಗೀತ ಕಲಾವಿದೆ. ಸಹಜವಾಗಿಯೇ ಅಂಕುಶ್‌ಗೆ ಎಳೆವಯಸ್ಸಿನಲ್ಲೇ ಸಂಗೀತದತ್ತ ವಿಶೇಷ ಒಲವು. ಮೊದಲಿಗೆ ಕರ್ನಾಟಕ ಸಂಗೀತವನ್ನು ಅಭ್ಯಾಸ ಮಾಡಿದ ಅಂಕುಶ್‌ಗೆ ನಂತರ ಹಿಂದೂಸ್ತಾನಿ ಸಂಗೀತದತ್ತ ಆಸಕ್ತಿ ಬೆಳೆಯಿತು. ಈ ಆಸಕ್ತಿಗೆ ನೀರೆರೆದು ಪೋಷಿಸಲು ಕಾರಣರಾದದ್ದು ಉಸ್ತಾದ್ ರಫೀಕ್ ಖಾನ್. ಒಂಬತ್ತನೇ ವಯಸ್ಸಿನಲ್ಲಿ ಸಿತಾರ್ ಅನ್ನು ರಫೀಕ್ ಖಾನ್ ಬಳಿ ಕಲಿಯಲು ಆರಂಭಿಸಿದರು. ಗುರು–ಶಿಷ್ಯ ಪರಂಪರೆಯಲ್ಲಿ ರಫೀಕ್ ಖಾನ್ ಬಳಿ ನಿರಂತರ ಅಭ್ಯಾಸ ಮಾಡಿದ ಅಂಕುಶ್ ತಮ್ಮ ಪ್ರತಿಭೆಯನ್ನು ಅನಾವರಣಕ್ಕೆ ಅವಕಾಶ ಸಿಕ್ಕಿತು. ಆಕಾಶವಾಣಿ ನಡೆಸಿದ 'ಅಂತರರಾಷ್ಟ್ರೀಯ ಮಕ್ಕಳ ಬಾನುಲಿ ಪ್ರಸಾರ ದಿನ'ದ ಪ್ರಯುಕ್ತ ಅಂಕುಶ್ ಸಿತಾರ್ ಕಛೇರಿ ಪ್ರಸಾರವಾಯಿತು. ತಮ್ಮ 10ನೇ ವಯಸ್ಸಿನಿಂದ ಕಛೇರಿ ನೀಡಲೂ ಆರಂಭಿಸಿದ ಈ ಬಾಲ ಕಲಾವಿದ.

ಮುಂದಿನ ವರ್ಷಗಳಲ್ಲಿ ಅಂಕುಶ್ ಸಿತಾರ್ ಜತೆಯಲ್ಲಿಯೇ ಲಯವಾದ್ಯಗಳಾದ ಮೃದಂಗ ಮತ್ತು ಘಟಂಗಳಲ್ಲೂ ಆಸಕ್ತಿ ವಹಿಸಿ, ಇದರಲ್ಲಿರುವ ಸುಂದರ 'ಲಯಕಾರಿ' ಅಂಶಗಳತ್ತ ಗಮನಹರಿಸಿದ. ಲಯವಾದ್ಯ ನಿಪುಣ ತ್ರಿಚ್ಚಿ ಕೆ.ಆರ್. ಕುಮಾರ್ ಅವರನ್ನು ಭೇಟಿಯಾಗಿ ಲಯದ ಬಗ್ಗೆ ಕಲಿತರು. ಕೋಲ್ಕತ್ತದ ಐಟಿಸಿ ಸಂಗೀತ ಸಂಶೋಧನಾ ಅಕಾಡೆಮಿಯ ಜೂನಿಯರ್ ಸ್ಕಾಲರ್ ಆಗಿ ಆಯ್ಕೆಯಾದರು. ಜತೆಗೆ ಖ್ಯಾತ ಸರೋದ್‌ವಾದಕ ಬುದ್ದದೇವ್ ದಾಸ್‌ಗುಪ್ತ ಅವರಿಂದ ಸರೋದ್ ಬಗ್ಗೆಯೂ ಮಾರ್ಗದರ್ಶನ ಪಡೆದರು.

ಸದ್ಯ ಸುರತ್ಕಲ್‌ನಲ್ಲಿರುವ ಎನ್‌ಐಟಿಯಲ್ಲಿ ಮೂರನೇ ವರ್ಷದ ಬಿ.ಟೆಕ್ ಪದವಿಯಲ್ಲಿ ಅಧ್ಯಯನ ನಡೆಸುತ್ತಿರುವ ಅಂಕುಶ್ ಸಿತಾರ್‌ನಲ್ಲಿ ಭರವಸೆ ಮೂಡಿಸುವ ಕಲಾವಿದನಾಗಿ ರೂಪುಗೊಂಡಿದ್ದಾರೆ. 'ಷಡ್ಜ' ಎಂಬ ಆಲ್ಬಂ ಅನ್ನು ಹೊರತಂದಿದ್ದಾರೆ. ತಮ್ಮ ಚೊಚ್ಚಲ ಸಿಡಿಯಲ್ಲಿ ಅಂಕುಶ್ ಪಟ್‌ದೀಪ್ ರಾಗ, ಸುಪ್ರಸಿದ್ಧ ರಾಗ ಶ್ಯಾಮ್ ಕಲ್ಯಾಣ್, ಕೀರವಾಣಿ, ದೇಸ್ ರಾಗಗಳನ್ನು ಅಚ್ಚುಕಟ್ಟಾಗಿ ನುಡಿಸಿದ್ದಾರೆ. ಇದರಲ್ಲಿರುವ ಆಲಾಪ ಮನಸ್ಸಿಗೆ ಮುದ ನೀಡುವಂತಿದೆ. ರಾಗ ವಿಸ್ತರಣೆ ಕೇಳಲು ಸೊಗಸಾಗಿದೆ. ಅಂಕುಶ್ ಸಿತಾರ್ ಕ್ಷೇತ್ರದಲ್ಲಿ ಇನ್ನಷ್ಟು ಮಿಂಚಿ ಖ್ಯಾತ ಕಲಾವಿದರಾಗಿ ರೂಪುಗೊಳ್ಳಲಿ ಎಂಬುದೇ ಎಲ್ಲರ ಆಶಯ.

–ಆರ್ಕೆ